doc-203
T.P-2

Regd No M 1299 34 th Year ತಾ|| 7—5—51

SATYAVADI

ಸತ್ಯವಾದಿ

ಸ್ಥಾಪಕರು- ಅರಮನೆ ಸಿದಸ್ತೆದಾರ್ ಎಂ. ಎ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಕಾಂಗ್ರೆಸ್ಸು ಮುಖಂಡರೆಲ್ಲರೂ

ಶುದ್ಧೀಕರಣ ಮಂತ್ರ ಜಪದಲ್ಲಿ ತಲ್ಲೀನರಾಗಿರುತ್ತಾಗಿ

ವಾರ್ತಿಕ ಕೂಗು ಕೇಳಿಬರುತ್ತಲಿದೆ. ಮಂತ್ರಿತ್ವವೃತ್ತಿಯು ಹೆಚ್ಚಿದಂತೆ ದೋಷವು ಬೆಳೆಯುತ್ತಲಿರುವುದು ಅತಿ ವಿಚಿತ್ರವಾಗಿದೆ. ಅಂದು ಜನಪ್ರತಿನಿಧಿ ಸಂಸ್ಥೆಯಾಗಿ ಬಾಳಿದ ಕಾಂಗ್ರೆಸ್ಸುರಂಗವು ಇಂದು ಜನತಾದ್ವೇಷಕ್ಕೆ ಪೂರ್ಣ ಪಾತ್ರವಾಗಿದೆ. ಈ ವಿಷಯವನ್ನು ಅರಿತಿದ್ದರೂ ಈವರೆಗೆ ಶುದ್ಧೀಕರಣದ ಜ್ಞಾಪಕವು ಬರಲಿಲ್ಲ. ಇಂದು ಮುಂದಿನ ಚುನಾವಣಾ ರಂಗಸ್ಥಳವು ಸನ್ನಿಹಿತವಾಗಿ ಸೆಂಕಟ ಬಂದಾಗ ವೆಂಕಟರಮಣ ' ಎಂಬಂತೆ ಶುದ್ಧೀಕರಣ ಮಂತ್ರಜಪಕ್ಕೆ ಆರಂಭಿಸಿರುವುದು ಅತಿ ವಿಚಿತ್ರ ವರ್ತನೆಯಾಗಿದೆ. ನಿಜವಾದ ಸಶಕ್ತತ್ವಾಪದಿಂದ ಶುದ್ಧೀಕರಣವನ್ನು ಅಪೇಕ್ಷಿಸಿದವರು ಒಬ್ಬಿಬ್ಬರಿದ್ದರೆ ಹಲವರು ಈ ಮಂತ್ರಜಪವಿಂದಲಾದರೂ ಇನ್ನೊಮ್ಮೆ ಅಧಿಕಾರಸದಾರೂಢರಾಗಬಹುದೆಂಬ ಭಾವನೆಯಿಂದಲೇ ಮಂತ್ರಜಪಕ್ಕೆ ಆರಂಭಿಸಿದವರಾಗಿರುತ್ತಾರೆ. ಜನತೆಯಾದರೂ ಇಂದಿನ ಮೂರು ವರ್ಷಗಳ ಅಡಳಿತದ ಅವ್ಯವಸ್ಥೆ, ಜೀವನ ನಿರ್ವಹಣದ ದುರವಸ್ಥೆಗಳನ್ನು ಮರೆತಿರಲಿಕ್ಕಿಲ್ಲ! ಈ ಮೂರು ವರ್ಷಗಳಲ್ಲಿ ನಮ್ಮ ಮುಖಂಡರು ಮಾಡಿದ ಸಹತಕ್ರಿಯೆಗಳಿಂದರೆ ಧರ್ಮದ್ರೋಹ, ಜಾಲ್ತನ, ಮೋಸ್ಕರ್ಟ್, ಸ್ವಾರ್ಥ ಸಾಧನೆಗಳಲ್ಲದೆ ನಿಜವಾಗಿ ದೇಶಹಿತ, ಧರ್ಮರಕ್ಷಣಾಕಾರಿ ಕಾರ್ಯಗಳು ಎವುವೆಂದೂ ತೋರಿಬರುವುದಿಲ್ಲ ವಿರೋಧಿ ಪಕ್ಷದ ಬಿದರಿಕೆಯೇ ಕಾಂಗ್ರೆಸ್ಸು ಶುದ್ಧೀಕರಣದ ಪರಮೌಷಧವೆಂಬುದಾಗಿ ಅಧ್ಯಕ್ಷ ಮಹಾಶಯರ ಸ್ಪಷ್ಟೋಕ್ತಿಯಿಂದ ಹೇಳಿರುವುದನ್ನು ಎಲ್ಲಾ ಪ್ರತಿನಿಧಿ ಮುಖಂಡರೂ ಜ್ಞಾಪಕದಲ್ಲಿಟ್ಟುಕೊಳ್ಳಲಿ!

— ಧರ್ಮಜ್ಯೋಧ

ಉಡ್‌ಲ್ಯಾಂಡ್ಸ್

ಅಮೋಘ 2 ನೇ ವಾರ

ಹನುಮಾನ್ ಪಾತಾಳ ವಿಜಯ

ಪಾತ್ರ : ಮಾನಕುಮಾರಿ, ಮಹಿಪಾಲ

— ಪ್ರತಿ ದಿನ 3 ಆಟಗಳು —

ರಣಜಿತ್ ಮನರಂಜನ 3 ನೇ ವಾ

PARDES ಪರದೇಸ್

ಮಧುಬಾಲ, ರಿಹಮಾನ್ ಶಕುಂತಳಾ, ಜಗದೀಶ ಸೇತಿ, ಕರಣ್ ದಿವಾನ್

ಪಾತ್ರವಹಿಸಿರುವ ಸೊಬಗಿನ ಹಿಂದಿ ಚಿತ್ರ

— ಪ್ರತಿ ದಿನ 3 ಪ್ರದರ್ಶನಗಳು —

ಖಾನೆಷುಮಾರಿ ಬದಲಾವಣೆ

ನ್ಯೂಯಾರ್ಕ್— ವಿಕಾರ್ಥರರ ಆತ್ಮ ಚರಿತ್ರೆಗಾಗಿ ಅವರಿಗೆ 50 ಲಕ್ಷ ಡಾಲರುಗಳನ್ನು ಕೊಡಲು ಕೆಲವರು ಮುಂದೆ ಬಂದಿದ್ದರೆಂದು ಅವರ ವಕ್ತಾರರಾದ ಮೇಜರ್ ಜನರಲ್ ಕೋರ್ಟನೆಯವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ನವದೆಹಲಿ— ಈಗ ವಿಸರ್ಜಿಸಲ್ಪಟ್ಟ ಕಾಂಗ್ರೆಸ್ ಡೆಮೊಕ್ರಾಟ್ ಫ್ರಂಟಿನವ ಪ್ರತ್ಯೇಕ ಅಖಿಲ ಭಾರತ ಸಕ್ಷ್ಮವೊಂದನ್ನು ರಚಿಸುವುದು ಅನಿವಾರ್ಯವೆಂದು ಪಾರ್ಲಿವೆಂಟು ಸದಸ್ಯ ಶ್ರೀ ಸಕ್ಸೇನಾ ಪ್ರಕಟಿಸಿರುವರು

ಹುಬ್ಬಳ್ಳಿ— ಕರ್ನಾಟಕ ಕಾಂಗ್ರೆಸಿಗರ ಮಹಾಧಿವೇಶನವನ್ನು ಇದೇ ತಿಂಗಳು ಕಡೆಯಲ್ಲಿ ನಡೆಸಲು ಏರ್ಪಾಡುಗಳು ಜರುಗುತ್ತಿವೆ

ನವದೆಹಲಿ— ಇಲ್ಲಿಗೆ 27 ಮೈಲಿ ದೂರದಲ್ಲಿರುವ ಪೂರ್ವ ಪಂಜಾಬಿನ ಸೋನಪೇಟೆ ಎಂಬಲ್ಲಿ ವರ್ಷಕ್ಕೆ 1 ಲಕ್ಷ ಸೈಕಲ್ ತಯಾರಿಸಬಲ್ಲ ಕಾರ್ಖಾನೆ ಸಧ್ಯದಲ್ಲೇ ಸ್ಥಾಪಿಸಲ್ಪಡುವುದೆಂದು ಸರದಾರ ಬಲದೇವ್ ಮಂತ್ರಿ ಹೇಳಿದಾರೆ.

ಈಜಿಪ್ಟು ಅರಸು ಫಾರೂಕ್‌ರವರ ವಿವಾಹವು ನಿನ್ನೆ ವೈಭವದಿಂದ ಜರುಗಿತು. ಅರಸು ತಮ್ಮ 17 ವರ್ಷದ ರಾಣಿಗೆ ನೈಲ್ ನದಿಯ ಮುಖದ ಭೂಮಿಯಲ್ಲಿ ತಮಗೆ ಸೇರಿರುವ 3 ಸಾವಿರ ಎಕ್ರೆ ಜಮೀನನ್ನು ಒಳುವಳಿ ಕೊಡುವರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ಆಚಾರ್ಯ ಕೃಪಾಲಿನಿ ಪಾರ್ಟಿಯವರ ಸೂಚಿಸಿದ ರೀತಿಯಲ್ಲಿ ಪುನರ್ರಚಿಸಲು ಸಾಧ್ಯವಿಲ್ಲವೆಂದು ಕಾ॥ ಅ॥ ತಾಂಡನ್ನರು ತಿಳಿಸಿರುವಂತೆ.

ಬೆಂಗಳೂರು ಸಿಟಿ, ಸಿವಿಲ್ ಸ್ಟೇಷನ್ ಮತ್ತು ಮೈಸೂರು ಸಿಟಿಯಲ್ಲಿ ಸೀಮೆಂಟು ಸಂಬಂಧಿಸಿದ ಸ್ಥಿತಿ ಕೆಟ್ಟಿರುವುದರಿಂದ, ಈ ಸ್ಥಳಗಳಲ್ಲಿನ ಸೀಮೆಂಟು ದಾಸ್ತಾನುದಾರರು ಪರ್ಮಿಟ್ ಇಲ್ಲದೆ 3 ಟನ್‌ಗಳವರೆಗೆ ಮಾರಬಹುದೆಂದು ಮಾಡಲಾಗಿದ್ದ ಆರ್ಡರ್‌ನ್ನು ಮನ್ನಾ ಮಾಡಿದೆಯೆಂದೂ, ಸೀಮೆಂಟು ಬೇಕಾದವರು ಸಿವಿಲ್ ಸಪ್ಲೈ ಕಂಟ್ರೋಲರು ಅಥವಾ ರೆವಿನ್ಯೂ ಅಧಿಕಾರಿಗಳಿಗೆ ಬರೆದುಕೊಳ್ಳಬೇಕೆಂದೂ ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.

ದಿವ್ಯವಾಣಿ

ಅಧಿಕಾರಿಗಳು ಜನತೆಯ ನಮ್ರ ಸೇವಕರು. — ಗಾಂಧೀಜಿ

ಪತ್ರಿಕಾ ಸಂಮೇಳನ

ಮೈಸೂರು: ಖಾನೇಷುಮಾರಿ ವರದಿ ಈ ಬಾರಿ ಕಳೆದ ಬಾರಿಯಂತಿರುವುದಿಲ್ಲ. ಅಷ್ಟು ದೊಡ್ಡದಾಗಿಯೂ ಇರುವುದಿಲ್ಲ — ಎಂದು ಮೈಸೂರು ಸಂಸ್ಥಾನದ ಖಾನೇಷುಮಾರಿ ಅಧಿಕಾರಿಯವರಾದ ಶ್ರೀ ಜಿ. ಬಿ. ಮಲ್ಲಾರಾಧ್ಯರವರು ಈ ಬಿಳಿಗ್ಯೆ ಮೈಸೂರು ಪೌರಸಭೆಯಲ್ಲಿ ಕರೆಯಲಾಗಿದ್ದ ಪತ್ರಿಕಾ ಸಂಮೇಳನದಲ್ಲಿ ತಿಳಿಸಿದರು

ಭಾರತದಲ್ಲಿ ಮಹಿಳೆಯರ ಸಂಖ್ಯೆ ಕಡಿವೆಯಾಗಿರುವುದಲ್ಲ ಎಂಬ ಪ್ರಶ್ನೆಗೆ ಅಮದು ಮಾಡಿಕೊಳ್ಳಬೇಕಾಗುವದು ಎಂದು ವಿನೋದವಾಗಿ ಉತ್ತರವಿತ್ತರು

ಸಂತಾನ ನಿರೋಧಕ್ರಮ ಭಾರತೀಯರಿಗೆ ಸಂಪ್ರದಾಯ ವಿರೋಧ ಆಗಬಗ್ಗೆ ಮೈಸೂರು ಸರ್ಕಾರ ಯಾವ ತೀರ್ಮಾನ ಸಹ ಮಾಡಿಲ್ಲ ಎಂದವರು ತಿಳಿಸಿದರು.

ಸುದ್ದಿಗಳು

ಹಾಸನ— ಪೌರಸಭಾಧ್ಯಕ್ಷರ ವಿರುದ್ಧ ಕೆಲಸದಸ್ಯರು ಅವಿಶ್ವಾಸ ಸೂಚಿಸಿ ವಿಶೇಷ ಸಭೆ ಕರೆಯಬೇಕೆಂದಿದಾರೆ.

ಸ್ವೀಡನ್ನಿನಲ್ಲಿ ವಿವಾಹ ವಿಚ್ಛೇದಿತಳಾದ ಸ್ತ್ರೀಯು ತನ್ನ ಹಿಂದಿನ ಗಂಡನಿಗೆ ಅವಶ್ಯವಿದ್ದಲ್ಲಿ ಭತ್ಯಕೊಡಬೇಕೆಂಬ ಕಾನೂನಿದೆ.

ಅಮೇರಿಕಾದ ಆರ್ಥಿಕ ಸಹಕಾರ ವರ್ಗದವರು ಬರ್ಮಾ ಪ್ರವಾಹ ತಡೆಗಟ್ಟಲು 59 ಸಾವಿರ ಡಾಲರ್ ಕೊಟ್ಟರು

ಮಹಾ ಗ್ವಾಲಿಯರ್‌ನಲ್ಲಿ ಮಹಿಳಾ ಸಂಸ್ಥೆಗಳೆಲ್ಲ ಸಭೆ ಕೂಡಿ ಇತ್ತೀಚೆಗೆ ಗ್ವಾಲಿಯರ್‌ನಲ್ಲಿ ನಡೆ ಆಚರಿಸಿದ ಮಹಿಳೆಗಾಗಿ ದುಃಖಿಸಿತು.

ಪರೀಕ್ಷಾ ಫಲಿತಾಂಶ

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಫಲಿತಾಂಶಗಳು ಈ ಬೆಳಿಗ್ಗೆ ಪ್ರಕಟವಾಯಿತು. ನಮ್ಮ ಕಛೇರಿಯಲ್ಲೂ ನೋಡಬಹುದು.

Announcement

Theatre building old material and furniture are being sold very cheap.

Apply to—

NEW OPERA TALKIE

MYSORE.

ಸಂವತ್ಸರ ೯ ಸಂಚಿಕೆ ೩೪ ॥ ಶ್ರೀ ॥ ತಾ॥ 7-5-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಮಠಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾತ್ತಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ : ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ ಸ್ವ. ಸಂಘ

ಮಾಯೆ (ಭಟ್ಟ ಸದಾಶಿವ ಶರ್ಮಾ)

(ಮುಂದುವರಿದುದು)

ನಾನು ದೇಹವೆಂಬೀ ಅಜ್ಞಾನದಿಂದ ದೇಹಸಂಗವು ಉತ್ಪನ್ನವಾಯಿತು ; ದೇಹಸಂಗದಿಂದ ಸಂಸಾರವಾಯಿತು. ಅತಏವ ಸಂಗವೇ ಸಂಸಾರಕ್ಕೆ ಕಾರಣ ; ಅದ್ದರಿಂದ ಸಂಗವೇ ಸಂಸಾರದಲ್ಲಿ ಎಲ್ಲಕ್ಕಿಂತ ಪ್ರಬಲವು ಸತ್ಸಂಗದಿಂದ ಹುಟ್ಟೋ ಫಲವೂ ಅಸತ್ಸಂಗದಿಂದ ಕೆಟ್ಟ ಫಲವೂ ಆಗುವುದೆಂಬುದನ್ನು ತಿಳಿಯುವುದೂ ಕಷ್ಟವಲ್ಲ ; ಆದ್ದರಿಂದ ಅನಾಚಾರವರ್ಜನ ಸಾಗೂ ಆಚಾರದ ಪಾಲನೆಯೇ ಧರ್ಮವು, ಅದೇ ತಪಸ್ಸು, ಅದೇ ಜ್ಞಾನ. ಇತರರೊಂದಿಗೆ ಅಲಾಪ, ಸ್ಪರ್ಶ, ಶಯನ ಅಥವಾ ಭೋಜನ ಮಾಡುವುದರಿಂದ ಅವರ ಪಾಪವು ನಮ್ಮನ್ನೇ ಏರುವುದೆಂದು ಶಾಸ್ತ್ರವು ಹೇಳುತ್ತದೆ— 'ಅಲಾಪಾದ್ ಗಾತ್ರಸಂಸ್ಪರ್ಶಾತ್ ಶಯನಾತ್ ಸಹಭೋಜನಾತ್ | ಸಂಕ್ರಾಮಂತಿ ಹಿ ಪಾಪಾನಿ ತೈಲಬಿಂದುರಿವಾಂಭಸಾ ' (ನಾರದ ಪಂಚರಾತ್ರ). ಅದ್ದರಿಂದ ಪಾಪಿಯ ಸಂಗವನ್ನೆಂದೂ ಮಾಡಬಾರದು. ಚಾಂಡಾಲನು ಅತ್ಯಂತ ಪಾಪಿಯು ; ಘೋರಪಾಪಪಥದಿಂದ ಚಾಂಡಾಲ ಕುಲದಲ್ಲಿ ಜನ್ಮವೆತ್ತುವನು; ಚಾಂಡಾಲರಲ್ಲಿ ಏದು ಪ್ರಕಾರವಿದೆ ಚಾಂಡಾಲ ವಂಶದಲ್ಲಿ ಜನ್ಮವೆತ್ತಿದವನು ಜಾತಿ ಚಾಂಡಾಲನು ; ಪವಿತ್ರ ಬ್ರಾಹ್ಮಣ ಕುಲದಲ್ಲಿ ಜನ್ಮವೆತ್ತಿ ಅಕೃತಜ್ಞನೂ ಅನಾಚಾರಿಯೂ ಕ್ರೋಧಿಯೂ ಶಠನೂ ಆದವನನ್ನು ಆಚಾರದಲ್ಲಿ ಚಾಂಡಾಲನೆಂದು ತಿಳಿಯಬೇಕು— 'ಅಕೃತಜ್ಞಮನಾರ್ಯಂ ಚ ದೀರ್ಘರೋಷಮನಾರ್ಜವ | ಜಪತೋಪೀಹ್ಯವಿದ್ಧಿ ಚಾಂಡಾಲಾನ್ ಜಾತ್ಯಾ ಭವತಿ ಪಂಚಮಃ (ಗರುಡ ಪುರಾಣ). ಭಗವದ್ವಿಮುಖ ವ್ಯಕ್ತಿಯು ಚಾಂಡಾಲನಿಗಿಂತಲೂ ಮಿಗಿಲಾದ ಪಾಪಿಯು : ಅಂದರೆ ಯಾವನು ನಾಸ್ತಿಕನೋ, ಶಾಸ್ತ್ರಜ್ಞನ್ನು ಸಂಬುವುದಿಲ್ಲವೋ, ಭಗವಂತನ ನಾಮವನ್ನು ಸದಾ ಸ್ಮರಣೆ ಮಾಡುವುದಿಲ್ಲವೋ ಅವನು ಚಾಂಡಾಲನಿಗಿಂತ ಅಧಮನು ಆತ್ಮರಕ್ಷಣೆಗಾಗಿ ಈ ಎಲ್ಲ ಮನುಷ್ಯರ ಸಂಗವನ್ನು ವಿಷದಂತೆ ತ್ಯಜಿಸಬೇಕು— 'ನಂ ಹುತವಹಜ್ವಲಂ ಭಕ್ತೋ ವಾಂಛತಿ ಪಿಂಜರಂ | ವಂ ಚ ಕಂಟಕೀ ವಾಸಂ ವಂ ಚ ವಿಷಭಕ್ಷಣಂ || ಹರಿಭಕ್ತಿವಿಹೀನಾನಾಂ ನ ಸಂಗೋ ನಾಶಕಾರಣಂ' (ಬ್ರಹ್ಮವೈವರ್ತ ಪುರಾಣ) : 'ಚಾಂಡಾಲಾದಧಮಃ ಪಾಪೀ ಶ್ರೀಕೃಷ್ಣವಿಮುಖೋ ನರಃ | ನಿಷ್ಫಲಸ್ತಸ್ಯ ವೈ ಧರ್ಮೋ ನಾಧಿಕಾರೀ ಸ ಕರ್ಮಣಾಂ ' (ನಾರದ ಪಂಚರಾತ್ರ) ; 'ಶ್ವಪಾಕಮಿವ ನೇಕ್ಷೇತ ಲೋಕೇ ವಿಪ್ರಮನೈಷ್ಣವಂ | ವೈಷ್ಣವೋ ವರ್ಣಬಾಹ್ಯೋಪಿ ಪುನಾತಿ ಭುವನತ್ರಯಂ' (ಪದ್ಮ ಪುರಾಣ).

ಮೂರ್ಖ ನಾಸ್ತಿಕರು ತಮ್ಮ ದುಷ್ಟ ಹಾಗೂ ಅಪರೀಕ್ಷಬುದ್ಧಿಯಿಂದ ಇದನ್ನೇ ಅಸ್ಪೃಶ್ಯತೆಯೆಂದು ಹೇಳಿ ಹೀಯಾಳಿಸುತ್ತಾರೆ ; ಒಬ್ಬೊಬ್ಬ ನಾಸ್ತಿಕನ ಮೂರ್ಖತೆಯ ಪಟ್ಟು ಅಹಂಕಾರದ ಪರಿಣಾಮವಂತೂ— ಈ ಅಸ್ಪೃಶ್ಯತೆಗಾಗಿ ನಮ್ಮಸ್ಮೃತಿಶಾಸ್ತ್ರವೂ ಆಗಾಧ್ಯವೂ ನಿಂದನೀಯವು — ಎನ್ನುವಷ್ಟರ ವರೆಗೆ ಮುಟ್ಟಿದೆ. ಶಾಸ್ತ್ರದ ವಿಧಾನವು ಅನುಪಮನೆಂದೂ ನಿರ್ದೋಷನೆಂದೂ ಹೇಳಬೇಕಾಗಿಲ್ಲ ; ಆ ಶಾಸ್ತ್ರಗಳು ಹೀಗೆ ಹೇಳುತ್ತವೆ— ಆತ್ಮರಕ್ಷಣೆಗಾಗಿ ಚಾಂಡಾಲಾದಿಗಳ ಸಂಗವನ್ನು ವಿಷದಂತೆ ತೊರೆಯಿರಿ ಹಾಗೂ ಅಹಂಕಾರದಿಂದ ನಿಮ್ಮನ್ನು ಳಿಸಿಕೊಳ್ಳುವ ಸಲುವಾಗಿ ಅದೇ ಜನರನ್ನು ದಂಡವತ್ ಪ್ರಣಾಮ ಮಾಡಬೇಕು - 'ಪ್ರಣಮೇದ್ ದಂಡವದ್ಭೂಮಾವಚ್ಚಂಡಾಲಗೋಖರಂ' (ಭಾಗವತ)— ಅಂದರೆ ಚಾಂಡಾಲನು ಆತ್ಮರಕ್ಷಣೆಗಾಗಿ ಅಸ್ಪೃಶ್ಯನು ; ಅಹಂಕಾರ ತ್ಯಾಗಕ್ಕಾಗಿ ಪ್ರಣಾಮ ಮಾಡಲು ಯೋಗ್ಯನು.

ಚಾಂಡಾಲಾದಿಗಳ ಘೋರ ಅಪವಿತ್ರ ದೇಹವನ್ನು ಪವಿತ್ರಗೊಳಿಸುವ ನಿಮಿತ್ತ ಸರ್ವಜ್ಞಶಾಸ್ತ್ರವು ಆಚಾರ ವಸ್ತು ಭಗವದ್ಭಕ್ತಿಯ ವ್ಯವಸ್ಥೆ ಮಾಡಿದೆ. ಮೂರ್ಖ ನಾಸ್ತಿಕರು ಚಾಂಡಾಲಾದಿಗಳ ಅಪವಿತ್ರತೆಯು ಮತ್ತೂ ಹೆಚ್ಚುವಂತಹ ವ್ಯವಸ್ಥೆ ಮಾಡಿ ಅವರನ್ನು ಶಿದ್ದಿಗೊಳಿಸಲಿಚ್ಛಿಸುತ್ತಾರೆ ; ಅನಂತದಲ್ಲಿ ಇಂದಿನ ವಿದ್ಯೆ ಧನ ವೃತ್ತಿಗಳನ್ನೂ ಶಾಸ್ತ್ರದ ನಿಂದೆಯನ್ನೂ ಮಾಡುವುದರಿಂದ ಚಾಂಡಾಲರ ಉದ್ಧಾರವಾಗುತ್ತದೆ ; ಆದರೆ ಇಂದಿನ ವಿದ್ಯೆಯನ್ನು ಶಾಸ್ತ್ರವು 'ಅವಿದ್ಯೆ' ಎನ್ನುತ್ತದೆ, ವಿದ್ಯೆಯೆಂದಲ್ಲ : ಕಾರಣ ಈ ವಿದ್ಯೆಯಿಂದ ಸಂಸಾರದ ಲಾಭವಾದೀತೇ ಹೊರತು, ಪರಮಾರ್ಥ ಲಾಭವಾಗುವುದಿಲ್ಲ, ಪರಮಾರ್ಥದ ಹಾನಿಯೇ ಆಗುವುದು. ಶಾಸ್ತ್ರದ ವ್ಯವಸ್ಥೆಯು ಸರಿಯಾದುದು, ಇತರ ವ್ಯವಸ್ಥೆಯು ಚಾಂಡಾಲರ ಸರ್ವನಾಶಕ್ಕೆ ಕಾರಣವು ಎಂದು ಹೇಳಬೇಕಾಗಿಲ್ಲ.

ಯಾವ ಚಾಂಡಾಲನು ಭಕ್ತನೋ, ಅವನು ಸ್ವರ್ಗ ಮರ್ತ್ಯ ಪಾತಾಳ, ಮೂರೂ ಭುವನಗಳನ್ನು ಪವಿತ್ರಗೊಳಿಸುವನು (ಪದ್ಮಪುರಾಣ) ; ಬ್ರಾಹ್ಮಣನು ಸರ್ವ ಶಾಸ್ತ್ರವನ್ನು ಬಲ್ಲವನಾದರೂ ನಮಗೆ ಪ್ರಿಯನಲ್ಲ ; ಆದರೆ ಚಾಂಡಾಲನು ನಮ್ಮ ಭಕ್ತನಾಗುವುದರಿಂದ ಪ್ರಿಯನಾಗುವನು ; ಅದೇ ಚಾಂಡಾಲನಿಗೆ ದಾನ ಮಾಡಬೇಕು ; ಅವನ ಕೈಯಿಂದಲೇ ದಾನಗ್ರಹಣಮಾಡಬೇಕು ; ಹಾಗೂ ಆ ಚಾಂಡಾಲನನ್ನು ಭಗವಂತನಿಗೆ ಸಮವಾಗಿ ಪೂಜೆಮಾಡಬೇಕು— 'ನ ಮೇ ಪ್ರಿಯಶ್ಚತುರ್ವೇದೀ ದ್ವಿಜಕ್ಕಿ ಶ್ವಪಚೋಪಿಯಃ | ತಸ್ಮೈ ದೇಯಂ ತತೋ ಗ್ರಾಹ್ಯಂ ಸ ಚ ಪೂಜ್ಯೋ ಯಥಾ ಹ್ಯಹಂ ' (ಶಿವಪುರಾಣ)

ಚಾಂಡಾಲನ ಮಾತಂತಿರಲಿ ; ಮ್ಲೇಚ್ಛನಾದರೂ ಸಹ ಭಕ್ತನಾದಲ್ಲಿ ಶ್ರೇಷ್ಠ ಬ್ರಾಹ್ಮಣನೂ ಮುನಿಯೂ ಜ್ಞಾನಿಯೂ ಆಗುವನು — 'ಏವಮನ್ಯ ವಿಧಂ ಚಿಹ್ನಂ ಯಸ್ಮಿಞ್ಜೇ ಮ್ಲೇಚ್ಛೇಪಿ ವರ್ತತೇ | ಸವಿಪ್ರೇಂದ್ರೋ ಮುನಿಃ ಶ್ರೀಮಾನ್ ಸಯತಿಃ ಸ ಚ ಪಂಡಿತಃ' (ಶಿವಪುರಾಣ).



ಸೋಮನಾಥದಲ್ಲಿ ಇದೇ ತಿಂಗಳ ೧೧ ನೇ ತಾ ಗೆ ಜರುಗಲಿರುವ ಮೂರ್ತಿ ಪ್ರತಿಷ್ಠಾಪನೆಯು ವೇದೋಕ್ತ ರೀತಿಯಲ್ಲಿ ನಡೆಯುವ ಆಶ್ವಾಸನ ದೊರೆಯದ್ದರಿಂದ ತಾವು ಆ ಸಮಾರಂಭದಲ್ಲಿ ಭಾಗವಹಿಸುವುದಿಲ್ಲವಾಗಿ ಶ್ರೀ ದ್ವಾರಕಾ ಪೀಠದ ಜಗದ್ಗುರು ಅಭಿನವ ಸಚ್ಚಿದಾನಂದ ತೀರ್ಥ ಶಂಕರಾಚಾರ್ಯರು ತಿಳಿಸಿದ್ದಾರೆ.

Edited, Printed and Published by M. S. Krishna Rao, at the Satyavadi Press Chamrajpuram Mysore